# 2012-13 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ "ಶ್ರೇಷ್ಠ ಕೃಷಿಕ"

**ವೈಯಕ್ತಿಕ ಮಾಹಿತಿ : ಶ್ರೀ ಮುತ್ತಣ್ಣ ಬೀರಪ್ಪ ಪೂಜಾರ**
**ಸಾ : ಕಾಮನಹಳ್ಳಿ, ಪೋ : ಮಂತಗಿ**
**ತಾ : ಹಾನಗಲ್ಲ ಜಿ : ಹಾವೇರಿ**
**ಮೊ. ನಂ. : 9743155774/9611887615**



**ಕೃಷಿಯಲ್ಲಿ ಮಾಡಿದ ಸಾಧನೆಗಳು**

**ಸಂಪನ್ಮೂಲಗಳು** : ಶ್ರೀಯುತರು 31 ಎಕರೆ ನೀರಾವರಿ ಜಮೀನು ಹೊಂದಿದ್ದು, 4 ಸ್ವದೇಶಿ ಆಕಳು ಹಾಗೂ 9 ಉತ್ತಮ ಜಾತಿಯ ಹಿಂಡು ಎಮ್ಮೆಗಳನ್ನಲ್ಲದೇ, 1500 ಕುರಿ, 150 ಮೇಕೆ ಹಾಗೂ 50 ಕೋಳಿಗಳನ್ನು ಸಾಕಿದ್ದಾರೆ.

**ಮಣ್ಣು ಹಾಗೂ ನೀರಿನ ಸಂರಕ್ಷಣಾ ವಿಧಾನ :** ತಮ್ಮ ಜಮೀನಿನಲ್ಲಿ ಕ್ಷೇತ್ರ ಸಮಪಾತಳಿ, ಬದು ಹಾಗೂ ಹೊಲದ ಸುತ್ತಲು ಸಾಗವಾನಿ, ಬೀಟೆ ಮತ್ತಿತರೆ ಕಾಡುಮರಗಳನ್ನು ಬೆಳೆಸಿದ್ದಾರೆ. ಹೊಲದ ಮಧ್ಯದಲ್ಲಿ ಅಂದಾಜು 150 ಅಡಿ X 100 ಕೃಷಿ ಹೊಂಡವನ್ನು ಮಾಡಿದ್ದು ಅದರಲ್ಲಿ ಮೀನುಗಾರಿಕೆ ಕೂಡ ಕೈಗೊಂಡಿದ್ದಾರೆ. ಭತ್ತ, ಕಬ್ಬು, ಬಾಳೆ, ಮಾವು, ಚಿಕ್ಕು, ಅಡಿಕೆ ಮತ್ತು ತೆಂಗು ಬೆಳೆಗಳಲ್ಲಿ ಹನಿ ನೀರಾವರಿ ಪದ್ಧತಿ ಅಳವಡಿಸಿದ್ದಾರೆ. ಬಾಳೆ ಮತ್ತು ಅಡಿಕೆ ತೋಟದಲ್ಲಿ ಪ್ರತಿ ಎರಡು ಅಡಿಕೆ ಸಾಲುಗಳ ಮದ್ಯ ಬಸಿಗಾಲುವೆಗಳನ್ನು ಮಾಡಿದ್ದಾರೆ ಮತ್ತು ಅದರಲ್ಲಿ ಹೆಚ್ಚಾಗಿ ಹರಿದು ಬರುವ ನೀರನ್ನು ಕೃಷಿ ಹೊಂಡಕ್ಕೆ ಸೇರಿಸುವ ವ್ಯವಸ್ಥೆ ಮಾಡಿದ್ದಾರೆ.

**ಬೆಳೆ ಪದ್ಧತಿಗಳು :** ಬೆಳೆ ಪದ್ಧತಿ, ಅಂತರ ಬೆಳೆ (ಮಾವಿನಲ್ಲಿ ತೊಗರಿ, ಚಿಕ್ಕು ಬೆಳೆಯಲ್ಲಿ ರಾಗಿ) ಹಾಗೂ ಮಿಶ್ರ ಬೆಳೆ ಪದ್ಧತಿಯಲ್ಲಿ ತರಕಾರಿ ಹಾಗೂ ಎಲ್ಲ ಸೊಪ್ಪಿನ ತರಕಾರಿಗಳನ್ನು ಬೆಳೆದಿದ್ದಾರೆ.

**ಕೃಷಿ/ಕೃಷಿಯೇತರ ಚಟುವಟಿಕೆಗಳು** : ಶ್ರೀಯುತರು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಹಾಗೂ ಬೆಳೆಗಳಿಗೆ ಸಸ್ಯಜನ್ಯ ಕೀಟನಾಶಕಗಳನ್ನು ಬಳಸುತ್ತಾರೆ. ತೋಟಗಾರಿಕೆಯಲ್ಲಿ ಮಾವು, ಚಿಕ್ಕು, ಬಾಳೆ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೀಜಾಮೃತ ಹಾಗೂ ಜೀವಾಮೃತ ಬಳಸಿ ಬೆಳೆದಿದ್ದಾರೆ. ಹುಲ್ಲುಗಾವಲಿನಲ್ಲಿ ಕುರಿ, ಆಡು, ಸಾಕಿಕೊಂಡಿದ್ದಾರೆ. ಉಪಕಸಬಾಗಿ ಮೀನುಗಾರಿಕೆ, ಜೇನು ಪೆಟ್ಟಿಗೆ ಅಳವಡಿಸಿದ್ದಾರೆ.

**ಮಣ್ಣಿನ ಫಲವತ್ತತೆ ಹಾಗೂ ಉತ್ಪಾದನಾ ನಿರ್ವಹಣೆ** : ಸ್ವಂತವಾಗಿ ಕೋಳಿ, ಕುರಿ, ಎಮ್ಮೆ ಸಾಕಿರುವುದರಿಂದ ಅವುಗಳಿಂದ ಬರುವ ಗೊಬ್ಬರಗಳನ್ನು ಉಪಯೋಗಿಸಿ, ಎರೆಹುಳು ಗೊಬ್ಬರಗಳನ್ನು ಉತ್ಪಾದಿಸಲಾಗುತ್ತಿದೆ. ಅಜೋಲ್ಲಾ ಕೃಷಿಯನ್ನು ಮಾಡುತ್ತಿದ್ದು, ಎಮ್ಮೆ ದನಕರುಗಳ ಆಹಾರದಲ್ಲಿ ಮಿಶ್ರಣ ಮಾಡುವದರಿಂದ ಪೌಷ್ಠಿಕಾಂಶಗಳು ಸಿಗುವಂತೆ ಮಾಡಲಾಗುತ್ತಿದೆ. ಜೈವಿಕ ಗೊಬ್ಬರಗಳಾದ ರೈಜೋಬಿಯಂ, ಅಜೋಟೋಬ್ಯಾಕ್ಟರ್ ಹಾಗೂ ರಂಜಕ ಕರಗಿಸುವ ಸೂಕ್ಷ್ಮಜೀವಾಣುಗಳನ್ನು ಉಪಯೋಗಿಸಲಾಗುತ್ತಿದೆ.

**ಕೃಷಿಯಲ್ಲಿ ಜೈವಿಕ ಪೀಡೆನಾಶಕಗಳ ಬಳಕೆ** : ಟ್ರೈಕೋಡರ್ಮಾ, ಜೀವಾಮೃತ, ಸಸ್ಯಜನ್ಯ ಪೀಡೆನಾಶಕ (ಸ್ವತ: ತಯಾರಿಸಿ) ಉಪಯೋಗಿಸಲಾಗುತ್ತಿದೆ.

**ಕೃಷಿ ಯಂತ್ರೋಪಕರಣಗಳು** : ಕೃಷಿ ಯಂತ್ರೋಪಕರಣಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ಟ್ರ್ಯಾಕ್ಟರ್ ಜೊತೆಗೆ ಟ್ರಿಲ್ಲರ್, ಬೀಜ ಹಾಗೂ ಗೊಬ್ಬರ ಬಿತ್ತುವ ಯಂತ್ರ, ಸಿಂಪರಕಗಳು, ಕಳೆ ತೆಗೆಯುವ ಯಂತ್ರ, ಕೊಯ್ಲು ಮತ್ತು ರಾಶಿ ಮಾಡುವ ಯಂತ್ರ, ಮೇವು ಕತ್ತರಿಸುವ ಯಂತ್ರ ಹಾಗೂ ಧಾನ್ಯ ಸಂಸ್ಕರಣಾ ಉಪಕರಣಗಳನ್ನು ಹೊಂದಿರುತ್ತಾರೆ.

**ಇಳುವರಿ ಹಾಗೂ ಉತ್ಪಾದನೆ** : ಶ್ರೀಯುತರು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಂದ ಒಟ್ಟು 36,77,000/- ರೂಗಳ ಆದಾಯ ಪಡೆಯುತ್ತಿದ್ದಾರೆ.

ಸುಮಾರು 7-8 ವರ್ಷಗಳಿಂದ ಯಾವುದೇ ರಾಸಾಯನಿಕ ಗೊಬ್ಬರ / ಔಷಧಿ ಉಪಯೋಗಿಸದೆ ಸಾವಯವ ಕೃಷಿ ಪದ್ಧತಿಯಲ್ಲಿ ಬೇಸಾಯ ಮಾಡುತ್ತಿದ್ದಾರೆ. ಇವರ ಸಾಧನೆ ವೀಕ್ಷಿಸಲು ಬಸವೇಶ್ವರ ಸಾವಯವ ಬೆಳೆ ಉತ್ಪಾದಕರ ಸಂಘ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದಿಂದ ಸುಮಾರು 400 ಜನ ರೈತರು, ಪದಾಧಿಕಾರಿಗಳು ಹಾಗೂ ಸಂಘದ ಸದಸ್ಯರು ಭೇಟಿ ನೀಡಿರುವರು. ಕೃಷಿಯ ಎಲ್ಲ ರಂಗಗಳಲ್ಲಿಯೂ ಹೆಜ್ಜೆ ಇಟ್ಟಿರುವ ಶ್ರೀ ಮುತ್ತಣ್ಣ ಅವರಿಗೆ ವಿವಿಧ ಸರ್ಕಾರಿ / ಸರ್ಕಾರೇತರ ಸಂಸ್ಥೆಗಳಿಂದ ಸನ್ಮಾನ ದೊರೆತಿದೆ.